DTE-CDC0CDC2/9/2024-JD CDC-DEPT TECH EDUCATION

I/544701/2024

ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಡಿಟಿಇ/09/ಸಿಡಿಸಿ(2)/2024(C-1288221)

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ,
ಅರಮನೆ ರಸ್ತೆ,
ಬೆಂಗಳೂರು-560001,
ದಿನಾಂಕ:22/01/2024.

**:ಸುತ್ತೋಲೆ:**

ವಿಷಯ: ಉನ್ನತ ವ್ಯಾಸಂಗ / ಕೈಗಾರಿಕಾ ತರಬೇತಿ / ಅಲ್ಪಾವಧಿ ತರಬೇತಿ ಇತ್ಯಾದಿ ಪ್ರಸ್ತಾವನೆಗಳನ್ನು ಇಲಾಖೆಗೆ ಸಲ್ಲಿಸುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ / ಇಂಜಿನಿಯರಿಂಗ್ ಕಾಲೇಜುಗಳ ಪ್ರಾಂಶುಪಾಲರುಗಳು ಸಂಸ್ಥೆಯ ಬೋಧಕ ವರ್ಗದವರನ್ನು ಉನ್ನತ ವ್ಯಾಸಂಗ/ಕೈಗಾರಿಕಾ ತರಬೇತಿ/ ಅಲ್ಪಾವಧಿ ತರಬೇತಿ ಕಾರ್ಯಕ್ರಮಗಳಿಗೆ ನಿಯೋಜಿಸುವ ಸಂಬಂಧ ಬೋಧಕ ವರ್ಗದವರು ನೀಡುವ ಪ್ರಸ್ತಾವನೆಗಳನ್ನು ಪರಿಶೀಲಿಸದೇ 'ಮುಂದಿನ ಕ್ರಮಕ್ಕಾಗಿ' ಎಂದಷ್ಟೆ ನಮೂದಿಸಿ ನಿಗದಿತ ದಾಖಲೆಗಳನ್ನು ಲಗತ್ತಿಸದೆ ಇಲಾಖೆಗೆ ಸಲ್ಲಿಸುತ್ತಿರುವುದರಿಂದ, ನಿಗದಿತ ಕಾಲಾವಧಿಯಲ್ಲಿ ಕೋರಿರುವ ಕಾರ್ಯಕ್ರಮಗಳಿಗೆ ಅನುಮತಿ ನೀಡಲು ಸಾಧ್ಯವಾಗದೆ ಅನಗತ್ಯವಾಗಿ ಪತ್ರ ವ್ಯವಹಾರಕ್ಕಾಗಿ ಕಾಲವಿಳಂಬವಾಗುತ್ತಿದೆ.

ಆದುದರಿಂದ ಪ್ರಾಂಶುಪಾಲರುಗಳು ಇಲಾಖೆಗೆ ಪ್ರಸ್ತಾವನೆ ಸಲ್ಲಿಸುವ ಪೂರ್ವದಲ್ಲಿ ಬೋಧಕ ವರ್ಗದವರು ನೀಡುವ ಪ್ರಸ್ತಾವನೆಗಳನ್ನು ಕಡ್ಡಾಯವಾಗಿ ತಮ್ಮ ಹಂತದಲ್ಲಿ ಕೂಲಂಕುಷವಾಗಿ ಪರಿಶೀಲಿಸಿ, ಅಗತ್ಯ ದಾಖಲೆಗಳನ್ನು ದೃಢೀಕರಿಸಿ, ಸ್ಪಷ್ಟ ಅಭಿಪ್ರಾಯದೊಂದಿಗೆ ಹದಿನೈದು ದಿನಗಳ ಮುಂಚಿತವಾಗಿ ಇಲಾಖೆಗೆ ಸಲ್ಲಿಸಲು ಸೂಚಿಸಲಾಗಿದೆ. ತಪ್ಪಿದ್ದಲ್ಲಿ ಮುಂದಿನ ಆಗು-ಹೋಗುಗಳಿಗೆ ಪ್ರಾಂಶುಪಾಲರುಗಳೇ ಜವಾಬ್ದಾರರಾಗಿರುತ್ತಾರೆಂದು ಈ ಮೂಲಕ ತಿಳಿಸಲಾಗಿದೆ.

ಜಂಟಿ ನಿರ್ದೇಶಕರು (ಸಿಡಿಸಿ).

23/01/24

23/01/2024

ಇವರಿಗೆ:

1. ಎಲ್ಲಾ ಸರ್ಕಾರಿ / ಅನುದಾನಿತ ಇಂಜಿನಿಯರಿಂಗ್ ಕಾಲೇಜು ಮತ್ತು ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರ ಗಮನಕ್ಕೆ - ಅಗತ್ಯ ಕ್ರಮಕ್ಕೆ
2. ಇ-ಆಡಳಿತ ವಿಭಾಗಕ್ಕೆ - ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸುವುದು.